

ಭಾರತದ ಮೊದಲ ಗೋಲು ಗಳಿಸಿ ಇತಿಹಾಸದ ಪುಟ ಸೇರಿದ ಜೀಕ್ಸನ್ ತೌನೊಜಾಮ್ ಸಂಭ್ರಮ

ಪಡೆದವರು ನಂತರ ರಾಷ್ಟ್ರೀಯ ತಂಡದಲ್ಲಿ ಮತ್ತು ದೇಶಿ ಟೂರ್ನಿಗಳಲ್ಲಿ ಹೆಸರು ಮಾಡಿದ್ದಾರೆ.

ವಿಕ್ಟರ್ ಜೇಮ್ಸ್ ಒಶಿಮೆನ್ 2015ರ ವಿಶ್ವಕಪ್‌ನ ಏಳು ಪಂದ್ಯಗಳಲ್ಲಿ ಒಟ್ಟು 10 ಗೋಲು ಗಳಿಸಿದ ಫಾರ್ವರ್ಡ್ ಆಟಗಾರ. ವಿಶ್ವಕಪ್ ಒಂದರಲ್ಲಿ ಆಟಗಾರನೊಬ್ಬನ ವೈಯಕ್ತಿಕ ಗೋಲುಗಳ ಸಂಖ್ಯೆ ಎರಡಂಕಿ ತಲುಪಿಸಿದ ಸಾಧಕ. ಈ ಟೂರ್ನಿಯ ನಂತರ 20 ವರ್ಷದೊಳಗಿನವರ ಟೂರ್ನಿಯಲ್ಲಿ ಅವಕಾಶ ಪಡೆದುಕೊಂಡ ಅವರು ಈಗ ನೈಜೀರಿಯಾ ರಾಷ್ಟ್ರೀಯ ತಂಡದಲ್ಲಿದ್ದಾರೆ.

ಕಳೆದ ವಿಶ್ವಕಪ್‌ನಲ್ಲಿ 'ಚಿನ್ನದ ಚೆಂಡು' ಪ್ರಶಸ್ತಿ ಗಳಿಸಿದ ನೈಜೀರಿಯಾದ ಕೆಲೆಚಿ ನೊಕಾಲಿ ಏಳು ಪಂದ್ಯಗಳಲ್ಲಿ ಮೂರು ಗೋಲು ಗಳಿಸಿದ್ದರು. ಹೀಗಾಗಿಯೇ 20 ವರ್ಷದೊಳಗಿನವರ ತಂಡಕ್ಕೆ ಸುಲಭವಾಗಿ ಆಯ್ಕೆಯಾಗಿದ್ದಾರೆ.

1985ರಲ್ಲಿ ನಡೆದ 17 ವರ್ಷದೊಳಗಿನವರ ಮೊದಲ ವಿಶ್ವಕಪ್‌ನಲ್ಲಿ 'ಚಿನ್ನದ ಶೂ' ಪ್ರಶಸ್ತಿ ತಮ್ಮದಾಗಿಸಿಕೊಂಡ ಜರ್ಮನಿಯ ಮಾರ್ಸೆಲ್ ವಿಟೆಜೆಕ್ ಆ ಟೂರ್ನಿಯ ಒಂಬತ್ತು ಪಂದ್ಯಗಳಲ್ಲಿ ಏಳು ಗೋಲು, ಮುಂದಿನ ವಿಶ್ವಕಪ್‌ನ ಆರು ಪಂದ್ಯಗಳಲ್ಲಿ ಎಂಟು ಗೋಲು ಗಳಿಸಿದ್ದರು. 1987ರ 20 ವರ್ಷದೊಳಗಿನವರ ಟೂರ್ನಿಯಲ್ಲಿ ಎಂಟು ಪಂದ್ಯಗಳಿಂದ ಏಳು ಗೋಲು ದಾಖಲಿಸಲು ಈ ಪಂದ್ಯಗಳು ವೇದಿಕೆಯಾಗಿದ್ದವು.

2013ರ ವಿಶ್ವಕಪ್‌ನಲ್ಲಿ ಚಿನ್ನದ ಶೂ ಗಳಿಸಿದ ನೈಜೀರಿಯಾದ ವಾಲ್ಮಿರ್ ಬೆರಿಶಾ ಒಟ್ಟು 17 ಪಂದ್ಯಗಳಲ್ಲಿ 13 ಗೋಲುಗಳನ್ನು ಸಂಪಾದಿಸಿದ್ದರು. ನಂತರ 19 ಮತ್ತು 23 ವರ್ಷದೊಳಗಿನವರ ತಂಡಕ್ಕೆ ಆಯ್ಕೆಯಾಗಿ ಸಾಧನೆಯ ಶಿಖರವೇರಿದ್ದಾರೆ. ಇದೇ ವಿಶ್ವಕಪ್‌ನಲ್ಲಿ ಚಿನ್ನದ ಚೆಂಡು ಗಳಿಸಿದ ನೈಜೀರಿಯಾದ ಕೆಲೆಚಿ ಏಳು ಪಂದ್ಯಗಳಲ್ಲಿ ಎಂಟು ಗೋಲು ಗಳಿಸಿದ ಅಪ್ರತಿಮ ಆಟಗಾರ. ನಂತರ ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾಗಿ ಸಾಧನೆಯ ಶಿಖರದತ್ತ ದಾಪುಗಾಲು ಹಾಕಿದ್ದಾರೆ. ಈ ವರೆಗೆ 11 ಪಂದ್ಯಗಳಲ್ಲಿ ಏಳು ಗೋಲುಗಳು ಅವರ ಬಗಲಿಗೆ ಬಿದ್ದಿವೆ.

2011ರ ವಿಶ್ವಕಪ್‌ನ 'ಚಿನ್ನದ ಶೂ' ಐವರಿ ಕೋಸ್ಟ್‌ನ ಸೋಲಮನ್ ಗೋಲೆಬಲೆ ಪಾಲಾಗಿತ್ತು. ಆ ಟೂರ್ನಿಯಲ್ಲಿ ಅವರು ಒಟ್ಟು ಒಂಬತ್ತು ಗೋಲು ಗಳಿಸಿದ್ದರು. ನಂತರ ನೇರವಾಗಿ 20 ವರ್ಷದೊಳಗಿವನರ ವಿಭಾಗ-ದಲ್ಲಿ ಅವಕಾಶ ಪಡೆದುಕೊಂಡು ಒಂಬತ್ತು ಪಂದ್ಯಗಳಿಂದ 14 ಗೋಲುಗಳ ಸಾಧನೆ ಮಾಡಿದ್ದಾರೆ. 2001ರ ವಿಶ್ವಕಪ್‌ನಲ್ಲಿ 'ಚಿನ್ನದ ಶೂ' ಮತ್ತು 'ಚಿನ್ನದ ಚೆಂಡು' ಗಳಿಸಿದ ಫ್ರಾನ್ಸ್‌ನ ಫ್ಲೋರೆನ್ಸ್ ಸಿನಾಮ ಪೊಂಗೊಲ್ ಆರು ಪಂದ್ಯಗಳಿಂದ ಗಳಿಸಿದ್ದು ಒಂಬತ್ತು ಗೋಲು. ಮುಂದಿನ ಐದು ವರ್ಷ 21 ವರ್ಷದೊಳಗಿನವರ ತಂಡದಲ್ಲಿ ಆಡಿದ ಅವರು 37 ಪಂದ್ಯಗಳಿಂದ 11 ಗೋಲುಗಳನ್ನು ದಾಖಲಿಸಿದ್ದಾರೆ. ಈ ಸಾಧನೆಗಳು ರಾಷ್ಟ್ರೀಯ ಆಯ್ಕೆ ಸಮಿತಿಯ ಗಮನ ಸೆಳೆದಿದ್ದರಿಂದ 2008ರಲ್ಲಿ ಫ್ರಾನ್ಸ್‌ನ ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾಗಿದ್ದಾರೆ.

## ಸೀನಿಯರ್ ವಿಭಾಗಕ್ಕೆ ಹೆಬ್ಬಾಗಿಲು

ದೇಶಿ ಮಟ್ಟದಲ್ಲಿ ನಡೆಯುವ ಟೂರ್ನಿಗಳಿಗೂ (ಸೀನಿಯರ್ ಫುಟ್‌ಬಾಲ್) 17 ವರ್ಷದೊಳಗಿನವರ ವಿಶ್ವಕಪ್ ಹೆಬ್ಬಾಗಿಲಾಗುತ್ತದೆ. ಮಾರ್ಸೆಲ್ ವಿಟೆಜೆಕ್ 1984–85ರ 17 ವರ್ಷದೊಳಗಿನವರ ವಿಶ್ವಕಪ್‌ಗಳ 15 ಪಂದ್ಯ-ಗಳಲ್ಲಿ 15 ಗೋಲು ಗಳಿಸಿ ಮಿಂಚಿದ್ದರು. ನಂತರ 1990ರ ವರೆಗೆ ವಿವಿಧ ವಯೋಮಾನದವರ ಟೂರ್ನಿಗಳಲ್ಲಿ 15 ಪಂದ್ಯಗಳಲ್ಲಿ 11 ಗೋಲು ಗಳಿಸಿದ ಅವರಿಗೆ ಸೀನಿಯರ್ ತಂಡದಲ್ಲಿ ಸಾಧನೆ ಮಾಡಲು ಅವಕಾಶ ಲಭಿಸಿತು. 2007ರ ವರೆಗೆ ಅವರು ಸೀನಿಯರ್ ವಿಭಾಗದಲ್ಲಿ 536 ಪಂದ್ಯಗಳನ್ನು ಆಡಿದರು.

2008–09ರ ಅವಧಿಯಲ್ಲಿ 25 ಪಂದ್ಯಗಳಲ್ಲಿ 18 ಗೋಲು ಗಳಿಸಿದ ಬೋರ್ಜಾ ಬಾಸ್ಟನ್ ನಂತರ ಸೀನಿಯರ್ ವಿಭಾಗದಲ್ಲಿ 207 ಪಂದ್ಯಗಳಲ್ಲಿ ಆಡಿ 80 ಗೋಲುಗಳೊಂದಿಗೆ ಮಿಂಚಿದ್ದಾರೆ.

## ಭಾರತದಲ್ಲೂ ನಿರೀಕ್ಷೆ

ಈ ಬಾರಿಯ ಟೂರ್ನಿಯೂ ಅಮೋಘ ಆಟಕ್ಕೆ ಸಾಕ್ಷಿಯಾಗಿದೆ. ಫ್ರಾನ್ಸ್‌ನ ಅಮಿನ್ ಗವಿರಿ, ಮಾಲಿಯ ಲಸಾನ ನದಿಯೆ, ಜರ್ಮನಿಯ ಜಾನ್ ಫೀಟ್ ಆರ್ಪ್, ಜಪಾನ್‌ನ ಕಿಯೆಟೊ ನಕಮುರ ಮುಂತಾದವರು ಗೋಲು ಗಳಿಕೆ-ಯಲ್ಲಿ ಕಾಲ್ಚಳಕ ತೋರಿಸಿದ್ದಾರೆ. ಈ ಸಾಲಿನಲ್ಲಿ ಭಾರತದ ಜೀಕ್ಸನ್ ತೌನೊಜಾಮ್ (2 ಪಂದ್ಯ, 1 ಗೋಲು) ಕೂಡ ಸೇರಿದ್ದಾರೆ.

ಗೋಲ್‌ಕೀಪರ್‌ಗಳ ಪೈಕಿ ಭಾರತದ ಧೀರಜ್ ಮೊಯಿರಂಗ್‌ತೆಮ್ ಅಪೂರ್ವ ಸಾಧನೆ ಮಾಡಿದ್ದಾರೆ. ಹೆಚ್ಚು ಗೋಲು ತಡೆದವರ ಪಟ್ಟಿಯಲ್ಲಿ ಅವರು ಮೂರನೇ ಸ್ಥಾನದಲ್ಲಿದ್ದಾರೆ. ಮೂರು ಪಂದ್ಯಗಳಲ್ಲಿ ಅವರು ಭಾರತಕ್ಕೆ ಉಳಿಸಿಕೊಟ್ಟ ಗೋಲುಗಳ ಸಂಖ್ಯೆ 16. ತಂಡದಲ್ಲಿ ಬೆಳಗಿದ ಆಟಗಾರರು ಈಗ ರಾಷ್ಟ್ರೀಯ ಆಯ್ಕೆ ಸಮಿತಿಯ ಗಮನ ಹಿಡಿದಿಟ್ಟಿದ್ದಾರೆ. ಭಾರತದಲ್ಲಿ ಫುಟ್‌ಬಾಲ್ ಬೆಳವಣಿಗೆಯ ನಿರೀಕ್ಷೆಯನ್ನೂ ಮೂಡಿಸಿದ್ದಾರೆ.